ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಮಾನ್ಯ ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯ ಬಗ್ಗೆ ಯಾವುದೇ ವಿಚಾರಣಾ ಆಯೋಗಗಳನ್ನು ರಚಿಸಿಲ್ಲ. ಆದರೆ, ಲೋಕೋಪಯೋಗಿ ಇಲಾಖೆಯಲ್ಲಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು ಈ ಸಂಸ್ಥೆಯು ತನಗೆ ವಹಿಸಿದ ಟೆಂಡರ್ ಕೆಲಸಗಳನ್ನು ಉಪಗುತ್ತಿಗೆ ನೀಡುತ್ತಿದ್ದು, ಇದರಿಂದಾಗಿ ಸದರಿ ಸಂಸ್ಥೆಗೆ: ಸರ್ಕಾರಕ್ಕೆ ನಷ್ಟ ಉಂಟಾಗಿದೆಯೇ ಎಂಬ ಬಗ್ಗೆ ಅಧಿ ಸೂಚನೆ ಸಂ: ಲೋಇ 46 ಎಸ್‌ಡಿಎ 95, ದಿ: 27-3-97ರಲ್ಲಿ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಸ್.ಇಕ್ಬಾಲ್ ಅಹ್ಮದ್ ಇವರ ನೇತೃತ್ವದಲ್ಲಿ ಏಕಸದಸ್ಯ ವಿಚಾರಣಾ ಆಯೋಗವನ್ನು ಸರ್ಕಾರವು ನೇಮಿಸಿರುತ್ತದೆ. ಈ ಆಯೋಗವು ಇನ್ನೂ ವರದಿ ಸಲ್ಲಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಾರ್ತಾ ಇಲಾಖೆಯಲ್ಲಿ ದರ್ಜೆ ಮತ್ತು ನೇಮಕಾತಿ ನಿಯಮ.

105(398)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯು ದರ್ಜೆ ಮತ್ತು ನೇಮಕಾತಿ ನಿಯಮಗಳನ್ನು ಹೊಂದಿದೆಯೇ?

ಆ) ಹೊಂದಿದ್ದಲ್ಲಿ ರಿವ್ಯು ಕಾರ್ಯವನ್ನು ಯಾವ ಸಾಲಿನಲ್ಲಿ ಮಾಡಲಾಗಿದೆ?

ಇ) ಬ್ಯಾಕ್‌ಲಾಗ್ ಹುದ್ದೆಗಳು ಏನಾದರೂ ಇವೆಯೇ?

ಈ) ಇದ್ದಲ್ಲಿ ಭರ್ತಿ ಮಾಡದಿರಲು ಕಾರಣವೇನು?

ಶ್ರೀ ಬಿ.ಕೆ.ಚಂದ್ರಶೇಖರ್ (ವಾರ್ತಾ ಸಚಿವರು):

ಅ) ಹೌದು.

ಆ) 1998ನೇ ಸಾಲಿನಲ್ಲಿ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಿತಿಯು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ರಿವ್ಯು ಕಾರ್ಯವನ್ನು ಮಾಡಿದೆ. ಮತ್ತು ಪರಿಷ್ಕೃತ ನೇಮಕಾತಿ ನಿಯಮಗಳನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಇ) ಎರಡು ಬ್ಯಾಕ್‌ಲಾಗ್ ಹುದ್ದೆಗಳು ಇರುತ್ತವೆ.

ಈ) ದ್ವಿತೀಯ ದರ್ಜೆ ಸಹಾಯಕ ವೃಂದದಲ್ಲಿ ಮುಂಬಡ್ತಿಯ 2 ಪರಿಶಿಷ್ಟ ಪಂಗಡದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿರುವುದರಿಂದ ಬ್ಯಾಕ್‌ಲಾಗ್ ಹುದ್ದೆಗಳು ಉಳಿದಿದೆ. ಅರ್ಹ ನೌಕರರು ಲಭ್ಯವಾದಾಗ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ ಸರಿದೂಗಿಸಲಾಗವುದು.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ದರ್ಜೆ ಮತ್ತು ನೇಮಕಾತಿ ನಿಯಮ.

106(400)

ಶ್ರೀ ಸುಬ್ಬಾರೆಡ್ಡಿ.ಕೆ.ಎನ್. (ಬಸವನಗುಡಿ): ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ತನ್ನದೇ ಆದ ದರ್ಜೆ ಮತ್ತು ನೇಮಕಾತಿ ನಿಯಮವನ್ನು ಹೊಂದಿದೆಯೇ?

ಆ) ಅನುಕಂಪದ ಆಧಾರದ ಮೇಲೆ ಉದ್ಯೋಗ ಬಯಸಿ ಮನವಿಗಳೇನಾದರೂ ಬಂದಿವೆಯೇ?

ಇ) ಬಂದಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು? ಬ್ಯಾಕ್‌ಲಾಗ್ ಹುದ್ದೆಗಳು ಏನುದರೂ ಇವೆಯೇ?

ಈ) ಇದ್ದಲ್ಲಿ ಇದುವರೆಗೂ ತುಂಬದಿರಲು ಕಾರಣವೇನು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಹೌದು.